2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ

ಸತ್ರ ಮೊಕದ್ದಮೆ ಸಂಖ್ಯೆಃ18/2022

ಹೆಚ್ಚುವರಿ ಪಿ.ಡಬ್ಲುಃ 20

| | | |
|---|---|---|
| ಸಾಕ್ಷಿಯ ಹೆಸರು | : | ಡಾಃ ಬಸವರಾಜ್ ಕೋಟಿ |
| ತಂದೆ ಹೆಸರು | : | ಅಶೋಕ್ |
| ವಯಸ್ಸು | : | 38 ವರ್ಷ |
| ವೃತ್ತಿ | : | ಹಿರಿಯ ವೈಜ್ಞಾನಿಕ ಅಧಿಕಾರಿ ಆರ್ ಎಫ್ ಎಸ್ ಎಲ್ , ಬೆಳಗಾವಿ |
| ವಾಸಸ್ಥಳ | : | ಬೆಳಗಾವಿ |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ 07-06-2023

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-

ನಾನು 2018 ರಿಂದ 2023 ಜನವರಿವರೆಗೆ ವಿದಿ ವಿಜ್ಞಾನ ಪ್ರಯೋಗಾಲಯ ಕಲ್ಬುರ್ಗಿಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ಈ ಪ್ರಕರಣಕ್ಕೆ ಸಂಬಂದಿಸಿದಂತೆ ದಿಃ 13-12-2021 ರಂದು ರಮೇಶ್ ಬಾಬು ಪಿಸಿ ನಂ. 149 ಇವರ ಮುಖಾಂತರ 9 ವಸ್ತು ಗಳನ್ನು ನಮ್ಮ ಕಚೇರಿಗೆ ಸ್ವಿಕೃತಗೊಂಡಿದ್ದು ಅವುಗಳನ್ನು ನಾನು ಪರೀಕ್ಷೆಗೆ ತೆರೆದು ನೋಡಲಾಗಿ ಅವುಗಳ ಮೇಲೆ ಇರುವ ಸೀಲ್ ಮತ್ತು ಪ್ಯಾಲ್ಕೊಂಡಿದ್ದು ಯಾಥಸ್ತಿತಿಯಲ್ಲಿರುತ್ತವೆ. ಸದರಿ ವಸ್ತು ಗಳು ಒಂದು ಮಚ್ಚು , ಕಾಟನ್ ಸ್ವಾಬ್ , ಕಂಟ್ರೋಲ್ ಸ್ವಾಬ್ , ಮಚ್ಚು , ಒಂದು ಶರ್ಟ್, ಒಂದು ಪ್ಯಾಂಟ್ , ಒಂದು ಬನಿಯನ್ , ಒಂದು ಕರ್ಚಿಪ್ , ಒಂದು ಸ್ಯಾರಿಗಳು ಇದ್ದವು ಅವುಗಳನ್ನು ಪರಿಶೀಲಿಸಲಾಗಿ ಕಂಟ್ರೋಲ್ ಸ್ವಾಬ್ ನ್ನು ಹೊರತುಪಡಿಸಿ ಉಳಿದ ಎಲ್ಲಾ ವಸ್ತು ಗಳನ್ನು ಹೊರತುಪಡಿಸಿ ರಕ್ತದ ಕಲೆಗಳು ಇದ್ದವು. ವಸ್ತು ಸಂಖ್ಯೆ 1,2 , 5,6 ಮತ್ತು 7 ರ ಮೇಲೆ ಮನುಷ್ಯನ ಎ ಗುಂಪಿನ

ರಕ್ತವಿದ್ದು , ವಸ್ತು ಸಂಖ್ಯೆ: 4 , 8 ಮತ್ತು 9 ರ ಮೇಲೆ ಮನುಷ್ಯ ಓ ಗುಂಪಿನ ರಕ್ತ ಇರುತ್ತದೆ ಎಂದು ವರದಿ ನೀಡಿರುತ್ತೇನೆ. ಸಾಕ್ಷಿಯೂ ನಿಪಿ-39 ನ್ನು ಮತ್ತು ಅದರಲ್ಲಿರುವ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಗಳನ್ನು ನಿಪಿ-39(ಬಿ), 39(ಸಿ) ಮತ್ತು 39(ಡಿ) ಎಂದು ಗುರುತಿಸಲಾಯಿತು . ಸಾಕ್ಷಿಯೂ ಮು.ಮಾ-1,2,7,8,11,9,12,13,10 ಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯೂ ನಿಪಿ-40 ನ್ನು ನೋಡಿ ಗುರುತಿಸಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-40(ಎ) ಎಂದು ಗುರುತಿಸಲಾಯಿತು .

<u>ಪಾಟೀಸವಾಲು ಆರೋಪಿತರ ಪರವಾಗಿ ಶ್ರೀ ಜಿ ಎಸ್ ಎ ವಕೀಲರಿಂದಃ</u>

ಸಾಮಾನ್ಯವಾಗಿ ಕೆಂಪು ರಕ್ತದ ಕಣಗಳು 20 ದಿನಗಳಲ್ಲಿ ಕೆಟ್ಟು ಹೋಗುತ್ತದೆ ಎಂದರೆ ಒಣಗಿದ ರಕ್ತದ ಕಣಗಳು ಕೆಡುವುದಿಲ್ಲ . ಬಿಳಿ ರಕ್ತದ ಕಣಗಳ ಬಗ್ಗೆ ನನಗೆ ಹೇಳಲು ಆಗುವುದಿಲ್ಲ . ಸಾಮಾನ್ಯವಾಗಿ ರಕ್ತದ ಎ ಮತ್ತು ಓ ಗುಂಪಿನಲ್ಲಿ ಯಾಂಟಿಜನ್ ಇರುತ್ತದೆ ಎಂದರೆ ಸರಿ. ಓ ಗುಂಪಿನ ರಕ್ತ ವನ್ನು ಗ್ರೂಪೀಜಿ ಮಾಡುವಾಗ ಯಾಂಟಿಬಾಡಿಸ್ ಬೇಕಾಗುತ್ತದೆ ಎಂದರೆ ಸರಿ . ಓ ಯಾಂಟಿಜನ್‌ಗೋಸ್ಕರ ಓ ಯಾಂಟಿಸಿರಪನ್ನು ಉಪಯೋಗಿಸಿ ಅದರಿಂದ ಪರೀಕ್ಷೆ ಮಾಡಿರುತ್ತೇವೆ. ಸದರಿ ನಾನು ಅಳವಡಿಸಿದ ಪರೀಕ್ಷಾ ವಿಧಾನವನ್ನು ನಿಪಿ-39 ರಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ . ಈ ಪ್ರಕರಣದಲ್ಲಿ ಯಾವುದೇ ವಸ್ತು ವನ್ನು ಪರೀಕ್ಷೆ ಪಡೆದಿಲ್ಲ ಎಂದರೆ ಸರಿಯಲ್ಲ . ಯಾವುದೇ ವಸ್ತು ಗಳನ್ನು ವೈಜ್ಞಾನಿಕ ಪರೀಕ್ಷೆ ಒಳಪಡಿಸಿಲ್ಲ ಎಂದರೆ ಸರಿಯಲ್ಲ . ರಕ್ತವೂ ಒಣಗಿದ ಸ್ಥಿತಿಯಲ್ಲಿ ಇರುವುದರಿಂದ ಗುಂಪಿನ ಪ್ಲಸ್ ಮತ್ತು ಮೈನಸ್ ಹೇಳಲಾಗುವುದಿಲ್ಲ ಎಂದರೆ ಸರಿ . ನಮ್ಮ ಪ್ರಯೋಗಾಲಯವೂ ಪೊಲೀಸ್ ವಿಭಾಗದ ಅಂಗವಾಗಿರುವುದರಿಂದ ನಿಪಿ-39 ಮತ್ತು 40 ನ್ನು ಈ ಪ್ರಕರಣಕ್ಕೆ ಸೃಷ್ಟಿಮಾಡಿದ್ದೇನೆ ಎಂದರೆ ಸರಿಯಲ್ಲ .

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.